# MBBS, BDS fees to go up by 15%

Rashmi Belur

BENGALURU, DHNS: Making undergraduate medical (MBBS) and dental (BDS) courses even more expensive, the state government on Thursday agreed to increase the fee by 15% against the previous year fee structure.

Following the government's decision, medical seat aspirants have to shell out Rs 1,11,959 per year against the previous Rs 97,350 for admission under government category quota in private colleges. Aspirants of dental courses have to pay Rs 72,484 per year against last year's Rs 63,030.

Alongside the hike in fee structure for government quota seats, the state has agreed to hike fee for institutional quota seats by 15%. As per the latest decision, the fee for institutional quota medical seats has gone up from Rs 6,83,100 to Rs 7,85,565. The same for dental courses is Rs 5,32,818 from Rs 4,63,320.

» MBBS, Page 6

## MBBS SEATS IN PVT COLLEGES

Govt quota
**Rs 97,350-Rs 1,11,952**

Institutional quota:
**Rs 6,83,100-Rs 7,85,565**

Govt colleges: **Rs 50,000**

### BDS seats in pvt colleges

Govt quota:
**Rs 63,030-Rs 72,484**

Institutional quota:
**Rs 4,63,320-Rs 5,32,818**

Govt colleges: **Rs 40,000**

## Tentative seats

The Minister also said that tentatively there are around 7645 medical seats and 2800 dental seats in 51 medical and 35 dental colleges across the State respectively (including private colleges). He also said that the Medical Council of India had sanctioned a new medical college - Bowring and Lady Curzon Medical College and Research Institute this year. He said that the sanctioned intake for this college was 150 seats.

# Govt agrees to hike MBBS, BDS...

MBBS, from Page 1

The government resolved to hike the fee structure at a meeting held by the Medical Education department with the representatives of various private medical colleges, linguistic and religious minority institutions and deemed-to-be and private medical universities on Thursday in Bengaluru.

Defending the hike in fee structure, E Tukaram, Medical Education Minister, said, "Private medical and dental colleges had petitioned to the government about their problems, including the hike in salaries of employees as per the 6th pay commission, the rising cost of medical equipment and sprucing up of infrastructure. Considering these difficulties faced by the colleges, we have agreed to hike the fee by 15%."

Private medical and dental colleges were demanding a whopping 25% hike in fee. M R Jayaram, chairperson of the Karnataka Professional Colleges Foundation, said, "We had asked the government for 25% hike. But the government agreed to increase it by 15%. As the admission process needs to commence in the next four days and in the interest of students, we did not want to drag it further and agreed for 15% hike."

However, the cost of medical and dental course in government colleges will remain the same at Rs 50,000 and Rs 40,000 per year respectively.

The decision by the state government has left the students and parents a worried lot. "This is an anti-student move by the government. If I don't get a seat in a government college, should I drop my dream of pursuing a medical course," questioned a medical seat aspirant from Chikkamagaluru.

Similarly, a parent from Chitradurga responded, "I feel the government yielded to the colleges as they are largely run by political leaders or their relatives. This would only benefit them and it serves no purpose especially for those hailing from poor and middle-class background."

Several student organisations too have expressed their dissent. Harsha Narayana, state secretary, Akhila Bharatiya Vidyarthi Parishad (ABVP), said, "The government has given in to intense lobbying by private medical colleges. As the seats in government colleges are only a few, the poor and middle class cannot even think of securing admission in private colleges. We will stage a statewide protest against the fee hike."

DH News Service

ಕನ್ನಡಪ್ರಭ

## ಸನ್ ಸುದ್ದಿ

# ವೈದ್ಯ, ಡೆಂಟಲ್ ಶುಲ್ಕ ಶೇ.15 ಏರಿಕೆ

## ಖಾಸಗಿ ಕಾಲೇಜುಗಳ ಫೀ ಹೆಚ್ಚಳಕ್ಕೆ ಸರ್ಕಾರ ಒಪ್ಪಿಗೆ

**ಬೆಂಗಳೂರು:** 2019–20ನೇ ಸಾಲಿನ ಖಾಸಗಿ ವೈದ್ಯ ಮತ್ತು ದಂತ ವೈದ್ಯ ಕಾಲೇಜುಗಳ ಶುಲ್ಕವನ್ನು ಶೇ.15ರಷ್ಟು ಹೆಚ್ಚಳ ಮಾಡಲು ರಾಜ್ಯ ಸರ್ಕಾರ ನಿರ್ಣಯ ಕೈಗೊಂಡಿದೆ. ಸರ್ಕಾರಿ ಕಾಲೇಜುಗಳಿಗೆ ಮಾತ್ರ ಶುಲ್ಕ ಹೆಚ್ಚಳ ಮಾಡದಿರಲು ನಿರ್ಧರಿಸಿದ್ದು, ಹಿಂದಿನ ವರ್ಷದ ಶುಲ್ಕವೇ ಮುಂದುವರಿಯಲಿದೆ. ಗುರುವಾರ ಖಾಸಗಿ ಮತ್ತು ಭಾಷಾ ಅಲ್ಪಸಂಖ್ಯಾತ ವೈದ್ಯಕೀಯ ಕಾಲೇಜುಗಳ ಅಸೋಸಿಯೇಷನ್ ಜತೆ ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಖಾಸಗಿ ಕಾಲೇಜುಗಳು ಶೇ.20ರಿಂದ 25ರಷ್ಟು ಶುಲ್ಕ ಹೆಚ್ಚಳ ಮಾಡುವಂತೆ ಬೇಡಿಕೆ ಇಟ್ಟಿದ್ದವು. ಅಂತಿಮವಾಗಿ ಶೇ.15ರಷ್ಟು ಹೆಚ್ಚಳ ಮಾಡಲು ಒಪ್ಪಿಗೆ ಸೂಚಿಸಲಾಗಿದೆ. ಕಳೆದ ವರ್ಷ ಶೇ.8ರಷ್ಟು ಹಾಗೂ ಈ ವರ್ಷ ಶೇ.15ರಷ್ಟು ಸೇರಿ ಕೇವಲ ಎರಡು ವರ್ಷಗಳಲ್ಲಿ ಶೇ.23ರಷ್ಟು ಶುಲ್ಕ ಹೆಚ್ಚಳ ಮಾಡಲಾಗಿದೆ. ಖಾಸಗಿ ಕಾಲೇಜಿನಲ್ಲಿ ಪಡೆಯುವ ಸರ್ಕಾರಿ, ಖಾಸಗಿ ಮತ್ತು ಮ್ಯಾನೇಜ್‌ಮೆಂಟ್ ಕೋಟಾ ಸೀಟುಗಳಿಗೆ ಶೇ.15ರಷ್ಟು ಶುಲ್ಕ ಹೆಚ್ಚಳ ಅನ್ವಯವಾಗಲಿದೆ. ಮೂಲ ಸೌಕರ್ಯ ಖರ್ಚು, ಬೋಧನಾ ಸಿಬ್ಬಂದಿ ವೇತನ ಹೆಚ್ಚಳವಾಗಿದೆ. ನೂತನ ತಂತ್ರಜ್ಞಾನ, ಪ್ರಯೋಗಾಲಯದ ಉಪಕರಣಗಳ ಖರೀದಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಖರ್ಚಿನ ಮೊತ್ತ ಹೆಚ್ಚಳವಾಗಿರುವುದರಿಂದ ಶುಲ್ಕ ಹೆಚ್ಚಳ ಮಾಡಲಾಗಿದೆ ಎಂದು ತಿಳಿದು ಬಂದಿದೆ.

**ನೂತನ ಶುಲ್ಕ ವಿವರ:** ಕಳೆದ ವರ್ಷ ಸರ್ಕಾರಿ ಕೋಟಾ ವೈದ್ಯ ಸೀಟಿಗೆ 97,350 ರು. ಮತ್ತು ದಂತ ವೈದ್ಯ ಸೀಟಿಗೆ 63 ಸಾವಿರ ರು. ಶುಲ್ಕವಿತ್ತು. ನೂತನ ಶುಲ್ಕ ಹೆಚ್ಚಳದ ಪ್ರಕಾರ ಸರ್ಕಾರಿ ಕಾಲೇಜಿನಲ್ಲಿ 50 ಸಾವಿರ ರು., ಖಾಸಗಿ ಕಾಲೇಜಿನಲ್ಲಿ ಸರ್ಕಾರಿ ಕೋಟಾ ಸೀಟಿಗೆ 1.11 ಲಕ್ಷ ರು. ಹಾಗೂ ಮ್ಯಾನೇಜ್ ಮೆಂಟ್ ಕೋಟಾ ಸೀಟಿಗೆ 7.85 ಲಕ್ಷ ರು. ಆಗಲಿದೆ. ದಂತ ವೈದ್ಯಕೀಯ ಸೀಟುಗಳು ಸರ್ಕಾರಿ ಕಾಲೇಜಲ್ಲಿ 40 ಸಾವಿರ, ಖಾಸಗಿ ಕಾಲೇಜಿನ ಸರ್ಕಾರಿ ಕೋಟಾದಡಿ 72,484 ರು. ಮತ್ತು ಮ್ಯಾನೇಜ್‌ಮೆಂಟ್ ಕೋಟಾದಡಿ 5.32 ಲಕ್ಷ ರು.ಗಳಾಗಲಿವೆ. ರಾಜ್ಯದ 51 ವೈದ್ಯಕೀಯ ಕಾಲೇಜುಗಳಲ್ಲಿ 7,645 ಮತ್ತು 35 ದಂತ ವೈದ್ಯ ಕಾಲೇಜುಗಳಲ್ಲಿ 2,800 ಸೀಟುಗಳು ದೊರೆಯುವ ಸಾಧ್ಯತೆಗಳಿವೆ. ಈ ವರ್ಷದಿಂದ ನಗರದ ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆರಂಭವಾಗುತ್ತಿರುವುದರಿಂದ ಹೆಚ್ಚುವರಿಯಾಗಿ 150 ಸೀಟುಗಳು ದೊರೆಯಲಿವೆ.

### ಶುಲ್ಕ ವಿವರ (2019-20ನೇ ಸಾಲು) (ರು.ಗಳಲ್ಲಿ)

| ಕಾಲೇಜು | ವೈದ್ಯ | ದಂತ ವೈದ್ಯ |
|---|---|---|
| ಸರ್ಕಾರಿ ಕಾಲೇಜು | 50,000 | 40,000 |
| ಸರ್ಕಾರಿ ಕೋಟಾ | 1,11,952 | 72,484 |
| ಖಾಸಗಿ ಕೋಟಾ | 6,83,100 | 4,63,320 |
| ಮ್ಯಾನೇಜ್‌ಮೆಂಟ್ | 7,85,565 | 5,32,818 |

# ವೈದ್ಯಕೀಯ ಪ್ರವೇಶ ಶುಲ್ಕ ಶೇ.15 ಹೆಚ್ಚಳ

**ಬೆಂಗಳೂರು:** ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಹಾಗೂ ಖಾಸಗಿ/ ಇನ್‌ಸ್ಟಿಟ್ಯೂಷನಲ್ ಕೋಟಾದ ಪ್ರವೇಶ ಶುಲ್ಕ ಪ್ರಸಕ್ತ ಸಾಲಿನಲ್ಲೇ ಶೇ.15ರಷ್ಟು ಹೆಚ್ಚಳವಾಗಲಿದೆ. ಆದರೆ ಸರ್ಕಾರಿ ವೈದ್ಯ ಹಾಗೂ ದಂತ ವೈದ್ಯ ಕಾಲೇಜುಗಳ ಪ್ರವೇಶ ಶುಲ್ಕ ಏರಿಕೆ ಮಾಡದಿರಲು ಸರ್ಕಾರ ತೀರ್ಮಾನಿಸಿದೆ.

ವಿಕಾಸಸೌಧದಲ್ಲಿ ಗುರುವಾರ ಸಚಿವ ಇ.ತುಕಾರಾಂ ಅಧ್ಯಕ್ಷತೆಯಲ್ಲಿ ನಡೆದ ಖಾಸಗಿ, ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತ ಹಾಗೂ ಡೀಮ್ಡ್ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸಭೆ ಬಳಿಕ ಮಾತನಾಡಿದ ಇ. ತುಕಾರಾಂ, ಖಾಸಗಿ ವೈದ್ಯ ಕಾಲೇಜುಗಳು ಶೇ.20ರಿಂದ ಶೇ. 25ರಷ್ಟು ಶುಲ್ಕ ಹೆಚ್ಚಿಸಲು ಬೇಡಿಕೆ ಇಟ್ಟಿದ್ದವು. ಅಂತಿಮವಾಗಿ ಶೇ.15ರಷ್ಟು ಶುಲ್ಕ ಹೆಚ್ಚಳಕ್ಕೆ ತೀರ್ಮಾನಿಸಲಾಯಿತು. ರಾಜ್ಯದಲ್ಲಿ 18 ಸರ್ಕಾರಿ ವೈದ್ಯ ಕಾಲೇಜು ಸೇರಿದಂತೆ ಒಟ್ಟು 51 ವೈದ್ಯಕೀಯ ಕಾಲೇಜುಗಳಿದ್ದು, ಸರ್ಕಾರಿ ಕೋಟಾದಡಿ 7,645 ವೈದ್ಯ ಸೀಟುಗಳಿವೆ. ಬೌರಿಂಗ್ ಮತ್ತು ಲೇಡಿ ಕರ್ಜನ್ ವೈದ್ಯಕೀಯ ಕಾಲೇಜಿನಲ್ಲಿ 150 ಸೀಟುಗಳು ಲಭ್ಯವಾಗಲಿವೆ. ಕಾರವಾರದ ವೈದ್ಯ ಕಾಲೇಜಿನ ಪ್ರಕರಣ ನ್ಯಾಯಾಲಯದಲ್ಲಿದ್ದು, ಸರ್ಕಾರ ಪ್ರಮಾಣ ಪತ್ರ ಸಲ್ಲಿಸಿದೆ. ▶ 6ನೇ ಪುಟಕ್ಕೆ

ವರ್ಗಾವಣೆ ಮಿತಿ ಶೇ.6ಕ್ಕೆ ಹೆಚ್ಚಳ » 7

ಉದಯವಾಣಿ

# ವೈದ್ಯಕೀಯ ಶುಲ್ಕ ಹೆಚ್ಚಳ

1ನೇ ಪುಟದಿಂದ ▸

ಜೂ. 25ರ ಹೊತ್ತಿಗೆ ಸ್ಪಷ್ಟತೆ ಸಿಗಲಿದೆ. ಮೂರು ಸರ್ಕಾರಿ ದಂತ ವೈದ್ಯ ಕಾಲೇಜು ಸೇರಿದಂತೆ ಒಟ್ಟು 35 ದಂತ ವೈದ್ಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ 2,800 ಸೀಟು ಲಭ್ಯವಾಗಲಿದೆ ಎಂದು ಹೇಳಿದರು.

**ಹಿಂದಿನ ವರ್ಷ ಶೇ.8 ಏರಿಕೆ:** ಕಳೆದ ವರ್ಷ ಖಾಸಗಿ ಕಾಲೇಜುಗಳಲ್ಲಿರುವ ಸರ್ಕಾರಿ ವೈದ್ಯ ಕೋರ್ಸ್‌ನ ಪ್ರವೇಶ ಶುಲ್ಕ ಶೇ.10ರಷ್ಟು ಹೆಚ್ಚಳಕ್ಕೆ ಸರ್ಕಾರ ಒಪ್ಪಿಗೆ ನೀಡಿತ್ತು. ಆದರೆ ಶುಲ್ಕ ನಿಯಂತ್ರಣ ಸಮಿತಿಯು ಹೆಚ್ಚಳ ಮಿತಿಯನ್ನು ಶೇ.8ಕ್ಕೆ ನಿಗದಿಪಡಿಸಿತ್ತು. ಹಾಗಾಗಿ ವೈದ್ಯ ಕೋರ್ಸ್‌ನ ಪ್ರವೇಶ ಶುಲ್ಕ ಕಳೆದ ವರ್ಷ 70,000 ರೂ.ನಿಂದ 97,350 ರೂ.ಗೆ ಏರಿಕೆಯಾಗಿತ್ತು. ಕಳೆದ ವರ್ಷ ಸರ್ಕಾರಿ ವೈದ್ಯ ಕಾಲೇಜುಗಳಲ್ಲಿನ ವೈದ್ಯ ಕೋರ್ಸ್ ಪ್ರವೇಶ ಶುಲ್ಕ 15,000 ರೂ.ನಿಂದ 50,000 ರೂ.ಗೆ ಏರಿಕೆಯಾಗಿತ್ತು. ಹಾಗಾಗಿ ಈ ಬಾರಿ ಶುಲ್ಕ ಹೆಚ್ಚಿಸದಿರಲು ಸರ್ಕಾರ ನಿರ್ಧರಿಸಿದೆ.

ವಿಜಯ ಕರ್ನಾಟಕ



# ಖಾಸಗಿ ಮೆಡಿಕಲ್ ಕಾಲೇಜು ಪ್ರವೇಶ ಶುಲ್ಕ 15% ಹೆಚ್ಚಳ

**ಬೆಂಗಳೂರು:** ಖಾಸಗಿ ಕಾಲೇಜುಗಳಲ್ಲಿ ವೈದ್ಯ ಹಾಗೂ ದಂತ ವೈದ್ಯ ಕೋರ್ಸ್‌ಗಳ ಪ್ರವೇಶ ಶುಲ್ಕ ಶೇ.15ರಷ್ಟು ಹೆಚ್ಚಾಗಲಿದೆ. ಆದರೆ, ಸರಕಾರಿ ಕಾಲೇಜುಗಳ ಪ್ರವೇಶ ಶುಲ್ಕದಲ್ಲಿ ಯಾವುದೇ ಬದಲಾವಣೆ ಇಲ್ಲ.

ವೈದ್ಯಕೀಯ ಶಿಕ್ಷಣ ಸಚಿವ ಇ. ತುಕಾರಾಂ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಖಾಸಗಿ, ಧಾರ್ಮಿಕ ಹಾಗೂ ಭಾಷಾ ಅಲ್ಪಸಂಖ್ಯಾತ ಮತ್ತು ಡೀಮ್ಡ್ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ''ಖಾಸಗಿ ವೈದ್ಯ ಕಾಲೇಜುಗಳು ಶೇ. 20ರಿಂದ 25ರಷ್ಟು ಪ್ರವೇಶ ಶುಲ್ಕ ಹೆಚ್ಚಿಸಲು ಬೇಡಿಕೆ ಮುಂದಿಟ್ಟವು. ಅಂತಿಮವಾಗಿ ಶೇ. 15 ಹೆಚ್ಚಳಕ್ಕೆ ತೀರ್ಮಾನಿಸಲಾಯಿತು,'' ಎಂದು ಸಭೆಯ ಬಳಿಕ ಸಚಿವ ತುಕಾರಾಂ ತಿಳಿಸಿದರು. ಈ ತೀರ್ಮಾನದಂತೆ ಖಾಸಗಿ ಕಾಲೇಜುಗಳಲ್ಲಿನ ಸರಕಾರಿ ಹಾಗೂ ಖಾಸಗಿ/ ಇನ್‌ಸ್ಟಿಟ್ಯೂಷನಲ್ ಕೋಟಾದ ಪ್ರವೇಶ ಶುಲ್ಕ ಶೇ 15ರಷ್ಟು ಹೆಚ್ಚಳವಾಗಲಿದೆ. ಕಳೆದ ವರ್ಷ ಪ್ರವೇಶ ಶುಲ್ಕವನ್ನು 8% ಹೆಚ್ಚಿಸಲಾಗಿತ್ತು.

»08



## ಎಷ್ಟು ಸೀಟು ಲಭ್ಯ?

- 18 ಸರಕಾರಿ, 33 ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ 7645 ವೈದ್ಯ ಸೀಟು
- 3 ಸರಕಾರಿ, 32 ಖಾಸಗಿ ದಂತ ವೈದ್ಯಕೀಯ ಕಾಲೇಜುಗಳಲ್ಲಿ 2800 ಸೀಟು
- ಹೊಸದಾಗಿ ಆರಂಭವಾದ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಕಾಲೇಜಿನಲ್ಲಿ 150 ಸೀಟು ಸಿಗಲಿದೆ. ಕಾರವಾರ ವೈದ್ಯ ಕಾಲೇಜಿನ ಪ್ರಕರಣ ಕೋರ್ಟ್‌ನಲ್ಲಿದೆ.

ವಿಜಯ ಕರ್ನಾಟಕ



# ಪ್ರವೇಶ ಶುಲ್ಕ 15% ಹೆಚ್ಚಳ

» ಮೊದಲ ಪುಟದಿಂದ

**ಸಮಿತಿ ವರದಿ ಆಧರಿಸಿ ಅನುಷ್ಠಾನ:** ''ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ (ಇಡಬ್ಲ್ಯುಎಸ್) ಅಭ್ಯರ್ಥಿಗಳಿಗೆ ಶೇ 10ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸುವ ಸಂಬಂಧ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್ ನೇತೃತ್ವದ ಸಮಿತಿ ನೀಡುವ ವರದಿಯ ಶಿಫಾರಸಿನ ಮೇರೆಗೆ ಕ್ರಮ ಕೈಗೊಳ್ಳಲಾಗುವುದು'' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

''ಅಧ್ಯಾಪಕರಿಗೆ 6ನೇ ವೇತನ ಆಯೋಗದ ಶಿಫಾರಸಿನನ್ವಯ ವೇತನ ಪರಿಷ್ಕರಣೆ, ಹೆಚ್ಚುತ್ತಿರುವ ಕಾಲೇಜು ನಿರ್ವಹಣೆ ವೆಚ್ಚ, ಆಧುನಿಕ ಹಾಗೂ ಹೊಸ ತಂತ್ರಜ್ಞಾನದ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿನ ಹೆಚ್ಚಳ ಮತ್ತಿತರ ಕಾರಣಗಳಿಂದ ಆರೋಗ್ಯಕರ ವಾಗಿ ವೈದ್ಯಕೀಯ ಕಾಲೇಜುಗಳು ನಡೆಯಲಿ ಎಂಬ ಉದ್ದೇಶದಿಂದ ಶುಲ್ಕ ಹೆಚ್ಚಳಕ್ಕೆ ಒಪ್ಪಿಗೆ ಸೂಚಿಸಲಾಗಿದೆ. ಅಲ್ಲದೆ, ನೆರೆ ರಾಜ್ಯಗಳ ವೈದ್ಯಕೀಯ ಕೋರ್ಸ್ ಗಳ ಪ್ರವೇಶ ಶುಲ್ಕವನ್ನು ಕೂಡ ಅವಲೋಕಿಸಿ ಶೇ 15ರಷ್ಟು ಶುಲ್ಕ ಹೆಚ್ಚಳಕ್ಕೆ ಸಮ್ಮತಿ ಸೂಚಿಸ ಲಾಗಿದೆ'' ಎಂದರು.

**ಕಳೆದ ವರ್ಷ ಶೇ 8ರಷ್ಟು ಹೆಚ್ಚಳ:** ಕಳೆದ ವರ್ಷ ಖಾಸಗಿ ಕಾಲೇಜುಗಳಲ್ಲಿನ ಸರಕಾರಿ ವೈದ್ಯ ಕೋರ್ಸ್‌ಗಳ ಪ್ರವೇಶ ಶುಲ್ಕವನ್ನು ಶೇ 10ರಷ್ಟು ಹೆಚ್ಚಳ ಮಾಡಲು ಸರಕಾರ ಸಮ್ಮತಿ ಸೂಚಿಸಿತ್ತು. ಆದರೆ, ಶುಲ್ಕ ನಿಯಂತ್ರಣಾ ಸಮಿತಿಯು ಶೇ 8ರಷ್ಟು ಹೆಚ್ಚಳಕ್ಕೆ ನಿಯಂತ್ರಣ ಹೇರಿತ್ತು. ಹೀಗಾಗಿ, ಖಾಸಗಿ ಕಾಲೇಜುಗಳಲ್ಲಿನ ಸರಕಾರಿ ಕೋಟಾದ ವೈದ್ಯ ಕೋರ್ಸ್‌ನ ಪ್ರವೇಶ ಶುಲ್ಕ ಕಳೆದ ವರ್ಷ 70,000 ರೂ.ಗಳಿಂದ 97,350 ರೂ.ಗಳಿಗೆ ಹೆಚ್ಚಳವಾಗಿತ್ತು.

**15ರಿಂದ 50 ಸಾವಿರಕ್ಕೆ ಏರಿದ್ದ ಶುಲ್ಕ:** ಇನ್ನು, ಸರಕಾರಿ ವೈದ್ಯ ಕಾಲೇಜುಗಳಲ್ಲಿನ ವೈದ್ಯ ಕೋರ್ಸ್ ಪ್ರವೇಶ ಶುಲ್ಕವನ್ನು ಕಳೆದ ವರ್ಷ 15 ಸಾವಿರ ರೂ. ಗಳಿಂದ ದಿಢೀರನೆ 50 ಸಾವಿರ ರೂ.ಗಳಿಗೆ ಹೆಚ್ಚಿಸಲಾಗಿತ್ತು. ಇದರಿಂದ ಈ ವರ್ಷ ಸರಕಾರಿ ಕಾಲೇಜುಗಳ ಪ್ರವೇಶ ಶುಲ್ಕವನ್ನು ಹೆಚ್ಚಿಸದಿರಲು ನಿರ್ಧರಿಸಲಾಗಿದೆ.

| ಸರಕಾರಿ ಕಾಲೇಜು ಕೋಟಾ | 2018-19 | 2019-20 |
|---|---|---|
| ಎಂಬಿಬಿಎಸ್ | 50,000 | 50,000 |
| ದಂತ ವೈದ್ಯ | 40,000 | 40,000 |
| **ಖಾಸಗಿ ಕಾಲೇಜುಗಳಲ್ಲಿನ ಸರಕಾರಿ ಕೋಟಾ:** | **2018-19** | **2019-20** |
| ಎಂಬಿಬಿಎಸ್ | 97,350 | 1,11,979 |
| ದಂತ ವೈದ್ಯ | 63,030 | 72,484 |
| **ಖಾಸಗಿ ಕಾಲೇಜುಗಳ ಖಾಸಗಿ/ ಇನ್‌ಸ್ಟಿಟ್ಯೂಷನಲ್ ಕೋಟಾ:** | **2018-19** | **2019-20** |
| ಎಂಬಿಬಿಎಸ್ | 6,83,100 | 7,85,565 |
| ದಂತ ವೈದ್ಯ | 4,63,320 | 5,32,818 |

ವಿಜಯವಾಣಿ

# ಮೆಡಿಕಲ್ ಕೋರ್ಸ್ ಶುಲ್ಕ ಶೇಕಡ15 ಹೆಚ್ಚಳಕ್ಕೆ ಪಟ್ಟು

**ಬೆಂಗಳೂರು:** ವೈದ್ಯಕೀಯ ಕೋರ್ಸ್‌ಗಳಲ್ಲಿ ಶೇ.15 ಶುಲ್ಕ ಹೆಚ್ಚಳಕ್ಕೆ ಪಟ್ಟು ಹಿಡಿದಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳು, ರಾಜ್ಯದ ವಿದ್ಯಾರ್ಥಿಗಳಿಗೆ ಶೇ.50 ಸೀಟು ಮೀಸಲಿಡಲು ಒಪ್ಪಿಗೆ ನೀಡಿವೆ.

ವೈದ್ಯಕೀಯ ಶಿಕ್ಷಣ ಸಚಿವ ಇ.ತುಕಾರಾಂ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು, ಸದ್ಯ ಇರುವ 12 ಲಕ್ಷ ರೂ. ಶುಲ್ಕವನ್ನು 15 ಲಕ್ಷಕ್ಕೆ ಏರಿಕೆ ಮಾಡಿದರೆ ಮಾತ್ರ ವೆಚ್ಚ ಸರಿದೂಗಿಸಿಕೊಳ್ಳಬಹುದು ಎಂಬ ಅಭಿಪ್ರಾಯವನ್ನು ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ನೀಡಿವೆ.



» ಶೇ.50 ಸೀಟು ರಾಜ್ಯಕ್ಕೆ ಬಿಡಲು ಆಡಳಿತ ಮಂಡಳಿಗಳ ಒಪ್ಪಿಗೆ

ನೀಟ್ ಪದ್ಧತಿ ಜಾರಿಗೆ ಬಂದ ಬಳಿಕ ರಾಜ್ಯದಲ್ಲಿ ಸೀಟುಗಳ ಪ್ರಮಾಣ ಕಡಿಮೆಯಾಗಿದೆ. ಹೊರ ರಾಜ್ಯದಲ್ಲಿ ಸೀಟುಗಳು ಲಭ್ಯವಿದ್ದರೂ, ರಾಜ್ಯದ ವಿದ್ಯಾರ್ಥಿಗಳು ಅಲ್ಲಿಗೆ ಹೋಗಲು ಆಸಕ್ತಿ ತೋರಿಸುತ್ತಿಲ್ಲ. ಈ ಬೆಳವಣಿಗೆಯಿಂದ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಸೀಟುಗಳು ಸಿಗುತ್ತಿವೆ. ಆದ್ದರಿಂದ ಶೇ.50 ಸೀಟನ್ನು ರಾಜ್ಯದವರಿಗೆ ಮೀಸಲಿಡುವುದೊಂದೇ ಪರಿಹಾರ ಮಾರ್ಗ ಎಂದು ಹೇಳಿವೆ.

ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಸೀಟುಗಳು ಲಭ್ಯವಾಗಬೇಕು ಎನ್ನುವ ನಿಟ್ಟಿನಲ್ಲಿ ಮಾರ್ಪಾಡು ಮಾಡಿಕೊಳ್ಳಲು ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಸಿದ್ಧವಿದ್ದು, ಈ ಬಗ್ಗೆ ಅಂತಿಮ ಸುತ್ತಿನ ಮಾತುಕತೆ ನಡೆಯಬೇಕಾಗಿದೆ. ಶುಲ್ಕ ಹೆಚ್ಚಳ ಬೇಡ ಎಂದು ವೈದ್ಯಕೀಯ ಶಿಕ್ಷಣ ಸಚಿವ ತುಕಾರಾಂ ಮನವಿ ಮಾಡಿದರೂ, ಖಾಸಗಿ ಸಂಸ್ಥೆಗಳು ಒಪ್ಪಿಲ್ಲ. ಈ ಹಿನ್ನೆಲೆಯಲ್ಲಿ ಮಾತುಕತೆ ಅಪೂರ್ಣವಾಗಿದ್ದು, ಮತ್ತೊಮ್ಮೆ ಮಾತುಕತೆ ನಡೆಯಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ತಮಿಳುನಾಡು ಮಾದರಿಯಲ್ಲಿ ಕಾನೂನು ರೂಪಿಸಲು ಸರ್ಕಾರ ಮುಂದಾಗಿದ್ದು, ಮಾತುಕತೆ ನಂತರ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ ಎಂದು ತಿಳಿದುಬಂದಿದೆ.